ಹಿಂದಿನ ಸೀಟಲ್ಲಿದ್ದ ಉದ್ದನೆ ಬಡಕಲುಶರೀರದ, ಕುರುಚಲು ಗಡ್ಡದ ವ್ಯಕ್ತಿ ತೊಡೆಯ ಮೇಲಿದ್ದ ಬಗಲುಚೀಲವನ್ನು ಸವರುತ್ತ 'ಇಲ್ಲೇ ಇದೆ. ಆದರೆ ಕಥೆಯೆಲ್ಲಾ ಹೇಳೋ ಅವಶ್ಯಕತೆ ಈ ಮಟ್ಟದಲ್ಲಿ ವ್ಯವಹಾರಕ್ಕೆ ಬೇಕಾಗಲಿಕ್ಕಿಲ್ಲ ಸಾರ್.'

'ನಿಮಗ್ಗೊತ್ತಿಲ್ಲ. ಸಂಪ್ರದಾಯಸ್ಥರು ಇರತಾರಪಾ. ಕೊಲೆ, ವ್ಯಭಿಚಾರ ಅಂತೆಲ್ಲ ತಮ್ಮನೇಲಿ ಬೇಡ ಅಂದ್ಬಿಡತಾರೆ.'

ಪಕ್ಕದಲ್ಲಿದ್ದವಳತ್ತ ನೋಡಿದ ನಾಯ್ಡು. ಕಿಟಕಿಯಾಚಿನ ನೆರಳು ಬೆಳಕಿನಾಟದಲ್ಲಿ ಮುಳುಗಿದಂತಿತ್ತು. ಸುಳಿವು ಸಿಕ್ಕಿದ್ದೇ ಹುಡುಗಿಯರು ತಾನು ತಾನು ಅಂತ ಮೇಲೆಬಿದ್ದು ಬಂದಿದ್ದರು. ಅವರಿವರಿಂದ ವಶೀಲಿ ಸಹ ಮಾಡಿಸಿದ್ದರು. ಹೊಸಬರಿಗೆ ಒಂದು ಪೈಸೆಯನ್ನೂ ಸಂಭಾವನೆ ಕೊಡಬೇಕಾಗಿರಲಿಲ್ಲ; ನಡೆಯುತ್ತಿತ್ತು. ಆದರೆ ಅವರ ಕಣ್ಣಲ್ಲಿ ಬಸಿಯುವ ಕನಸು ಮತ್ತವರ ಹುಂಬ ಉತ್ಸಾಹವೊಂದರಿಂದ ಕೆಲಸವಾಗೋದಿಲ್ಲ. ತನ್ನ ಹಣ ಮತ್ತು ಹೆಸರಿನ ಭವಿಷ್ಯ? ಅದರ ಜೊತೆ ಜೂಜಾಡಲು ಸಾಧ್ಯವಿಲ್ಲ. ಇವಳು ಒಂದು ಧಾರಾವಾಹಿಯಲ್ಲಿ ಆಗಲೇ ಮಾಡಿದ್ದಳು. ಇನ್ನೂ ಹೆಚ್ಚಿನ ಅನುಭವವಿರೋವರನ್ನೇ ತೆಗೆದುಕೊಳ್ಳಲಾ ಅನ್ನುವ ಮೀನಮೇಷವಿತ್ತು. ಆದರೆ ಏಕೋ ಈ ಪಾತ್ರಕ್ಕೆ ಇವಳೇ ಸರಿ ಅಂತ ಅನ್ನಿಸಿಬಿಟ್ಟಿತ್ತು. ಈ ಗೋಪಾಲ ರಾವ್ ಬೇರೆ, ತಾನು ಕಥೆ ಬರೆಯುವಾಗ ನೆನಸಿಕೊಂಡ ರೀತಿಯದೇ ಹುಡುಗಿ ಅಂದ. ಮೇಲಿಂದ ಅಂತಹ ಹೆಚ್ಚಿನ ಸಂಭಾವನೆ ಕೊಡಬೇಕಿಲ್ಲ. ಆಯ್ಕೆ ಮಾಡಿದ್ದಾಗಿತ್ತು. ತಪ್ಪಾಗಲಿಲ್ಲ, ಹೇಳಿದ್ದನ್ನ ಚೆನ್ನಾಗಿ ಮಾಡಿದಾಳೆ ಈವರೆಗಿನ ಎಲ್ಲಾ ಎಪಿಸೋಡುಗಳಲ್ಲಿ. ಆದರೂ ಗೊತ್ತಾಗದ ಅಸಮಾಧಾನ ಕಾಡುತ್ತಿತ್ತು ನಾಯ್ಡುವನ್ನು. ಹದವಾದ ಎತ್ತರವಿದ್ದುದು ಹೀರೊಗಳಿಗೆ ಸರಿಯಾಗಿ ಹೊಂದಿಕೆಯಾಗತಾಳೆ. ಎದೆ, ಸೊಂಟದ ಭಾಗ ಫೋಟೊದಲ್ಲಿ ಆಕರ್ಷಕವಾಗಿ ಬರುತ್ತೆ ಎಲ್ಲಾ ಸರಿ. ಇವಳನ್ನ ಜನ ಮೆಚ್ಚಲು ಶುರುವಾಗಿ ಟೀಆರ್‌ಪಿಯು ಏರತೊಡಗಿದೆ. ಆದರೆ ಮುಖದಲ್ಲಿ ಕೊರತೆಯಾಗುವ ಆ ಕೆಮಿಸ್ಟ್ರಿ ಅಂತಾರಲ್ಲ ಅದಕ್ಕೆ ಬೇಕಾದ ಯಾವುದೋ ಸಾಕಾಗತಿಲ್ಲ ಅನಿಸುತ್ತಿತ್ತು. ಅಥವ ತನಗೇ ಹಾಗನಿಸುತ್ತಿದೆಯೇನೊ. ಸಂಗಡ ಇವಳಮ್ಮ ಬೇರೆ ಹಿಂದೆಯೇ ಇರತಾಳೆ. ಹೀಗಾದ್ರೆ ಈ ಫೀಲ್ಡಿನಲ್ಲಿ ಮುಂದೆ ಬಂದ್ಹಾಗೇನೆ! ಅವಳಿಗೆ ಹೇಳಬೇಕು ನಿನ್ನಮ್ಮನಿಗೆ ತಿಳಿಯಹೇಳು ಅಂತ.

ಟೀವಿ ಧಾರಾವಾಹಿಗೆ ಅಂತ ಎಂಟು ಕಂತುಗಳನ್ನು ಚಿತ್ರೀಕರಿಸಿಕೊಂಡು ಚಾನಲ್ ಆಫೀಸುಗಳಿಗೆ ಅಲೆದಾಡಿದ್ದ. ಬೆಳಗಿನ ಹನ್ನೊಂದು ಗಂಟೆಯದು, ಮಧ್ಯಾಹ್ನ ಮೂರು ಗಂಟೆಯದು ಹೀಗೆಲ್ಲ ಕೆಲವು ಸಿಗುವಂತಿದ್ದರೂ ಅವನಿಗೆ ತೃಪ್ತಿಯಾಗಲಿಲ್ಲ. ಆ ಸಮಯದಲ್ಲಿ ಹೆಚ್ಚು ಜನರಿಗೆ ಪುರುಸೊತ್ತಿರುವುದಿಲ್ಲ. ಹಾಗಿರುವಾಗಲೇ ಒಳ್ಳೆಯ ಜನಪ್ರಿಯತೆಯಿರುವ 'ಚಕೋರಿ' ಚಾನೆಲ್ಲಿನಲ್ಲಿ ಪ್ರಯತ್ನಿಸಿದ್ದ. ಗ್ರಾಸ್ ರೇಟಿಂಗ್ ಪಾಯಿಂಟಿನಲ್ಲೇ ಮೇಲಿರೋ ಚಾನೆಲ್ಲು ಅದು. ಪೈಪೋಟಿಯಿರೋದೆ. ಸಿಗುವ ನಿರೀಕ್ಷೆಯಿರಲಿಲ್ಲ. ಆದರೆ ರಾತ್ರಿ ಎಂಟರಿಂದ ಎಂಟೂವರೆಯ ಪ್ರೈಂ ಟೈಮಿನ ಸ್ಲಾಟ್ ಸಿಕ್ಕುಬಿಟ್ಟಿತ್ತು! ಅದೃಷ್ಟವನ್ನು ಅವನಿಗೇ ನಂಬಲಾಗುತ್ತಿಲ್ಲ! ಆದರೆ ವಾಹಿನಿಗೆ ಮಾತ್ರ ದೊಡ್ಡಮೊತ್ತವನ್ನು ಕೊಡಬೇಕಿತ್ತು. ವಾಹಿನಿಯ ಹೆಸರು ಮತ್ತು ಪ್ರಸಾರವಾಗುವ ಸಮಯವನ್ನು ನೋಡಿದ ಮೂರು ನಾಲ್ಕು ಮಲ್ಟಿನ್ಯಾಷನಲ್ ಕಂಪನಿಗಳು ಜಾಹೀರಾತು ಕೊಡಲು ಬಂದುಬಿಟ್ಟವು. ಇದು ನಾಯ್ಡು ತಲೆಮೇಲೆ ಬೆಟ್ಟದಂತ ಭಾರವನ್ನು ಹೊರಿಸಿತ್ತು. ಸೆಕೆಂಡಿನ ಲೆಕ್ಕದಲ್ಲಿ ಜಾಹೀರಾತಿಗೆ ಹಣ ಬಾಚುತ್ತದೆ ಚಾನೆಲ್ಲು. ವಾರದ ಐದು ಕಂತುಗಳಿಗೆ ಚಾನೆಲ್ಲಿಗೆ ಒಂದೊಂದು ಜಾಹೀರಾತಿಗೂ ಮೂರು ಲಕ್ಷ ಹೋದರೆ ತನಗೆ ಎರಡು ಬರುತ್ತದೆ. ಖುಷಿಗಿಂತ ಹೆಚ್ಚು ಗಾಬರಿ ಹುಟ್ಟಿಬಿಟ್ಟಿದೆ! ಚಾನೆಲ್ಲಿನ ಮತ್ತು ಆ ಹೆಸರಾಂತ ಕಂಪನಿಗಳ ವಿಶ್ವಾಸವನ್ನುಳಿಸಿಕೊಳ್ಳಬೇಕಾದ ಒಜ್ಜೆ ತಲೆಗೇರಿದೆ. ಅದಾಗಬೇಕಿದ್ದರೆ ಧಾರಾವಾಹಿಯ ಪ್ರತಿ ಕಂತನ್ನು ಅತ್ಯುತ್ತಮವಾಗಿ ಹೆಣೆದು ಟೀಆರ್‌ಪಿ ಏರಿಸಬೇಕು. ಟೀಆರ್‌ಪಿ ಏರಿದಂತೆ ಹೆಚ್ಚೆಚ್ಚು ಜಾಹೀರಾತು ಮತ್ತು ಏರುವ ಸೆಕೆಂಡಿನ ದರ! 'ಇದು ಏನೂ ಅಲ್ಲ. ಭಾರತ ಪಾಕಿಸ್ತಾನ ನಡುವಿನ ಕ್ರಿಕೆಟ್ ಮ್ಯಾಚು ಬಿತ್ತರಿಸೋ ಸಮಯದಲ್ಲಿ ಜಾಹೀರಾತಿಗೆ ಸೆಕೆಂಡಿನ ದರವೇ ಲಕ್ಷದಲ್ಲಿರುತ್ತೆ. ಎಲ್ಲಿದೀಯ ನೀನು!' ಹೇಳಿದ್ದ ಲಾಯರು ಪ್ರಕಾಶ ರೆಡ್ಡಿ.

ಕಾಮಿನಿ ಕಲ್ಕೆರೆಯವರ ಕಾದಂಬರಿಯಲ್ಲಿ ಸನ್ನಿವೇಶಗಳು ಚೆನ್ನಾಗಿದ್ದವು. ಅಳೆದು ಸುರಿದು ಅಲ್ಲಿ ಸೇರಿಸಿ, ಇಲ್ಲಿ ತುಂಡುಮಾಡಿ ಅಂತ, ಮೂಲಕಥೆಯಿಂದ ಎಲ್ಲೆಲ್ಲೊ ಹೋಗತೊಡಗಿತ್ತು. ದೃಶ್ಯಮಾಧ್ಯಮಕ್ಕೆ ತರುವಾಗ ಇದೆಲ್ಲ ಸಾಮಾನ್ಯ. ಆದರೆ ಹೇಗೆ ಮಾಡಿದರೆ ಹೇಗೋ ಅನ್ನುವ ಆತಂಕ ಕಡಿಮೆಯಾಗುತ್ತಿಲ್ಲ!

ನಾಯ್ಡುವಿನ ಯೋಜನೆ ಇಲ್ಲಿಗೆ ನಿಂತಿರಲಿಲ್ಲ. ಕಿರುತೆರೆಯನ್ನು ಒಂದು ಜಿಗಿಯುವ ಹಲಗೆಯಾಗಿ ಕಲ್ಪಿಸಿಕೊಂಡಿದ್ದ. ಅಲ್ಲಿಂದ ಬಾಲಿವುಡ್ ಎಂಬ ಸಮುದ್ರಕ್ಕೆ ಲಂಘಿಸಬೇಕು; ಹಣ ಹರಿದು ಬರುವ ಅದ್ಭುತ ಚಿತ್ರಗಳನ್ನು ಮಾಡಬೇಕೆನ್ನುವುದು ಅವನ ಜೀವನದ ಮಹತ್ವಾಕಾಂಕ್ಷೆಯಾಗಿತ್ತು. ತೆಲುಗಿನ ಎರಡು ಸಿನಿಮಾಗಳಲ್ಲಿ ಇವನೂ ಪಾಲುದಾರನಾಗಿ ಸೇರಿದ್ದ. ಅಂತಹ ಯಶಸ್ಸು ಸಿಗದಿದ್ದರೂ ಸಾಲಮಾಡಿ ಹಾಕಿದ ಹಣ ವಾಪಸು ಬಂತು. ಅಲ್ಲಿಯ ಅನುಭವ ಮತ್ತು ತಂತ್ರಗಳು ಸಾಕಷ್ಟು ಪರಿಚಿತವಾಗಿದ್ದವು. ಇಲ್ಲಿ ಹೇಗೂ ಸಬ್ಸಿಡಿ ಸಿಗುತ್ತದೆ. 'ಸಿ' ಕೇಂದ್ರದ ಟಾಕೀಸುಗಳಲ್ಲಿ ಒಂದಿಷ್ಟು ದಿನ ಓಡಿದರೂ ಸಾಕು; ಹಾಕಿದ್ದು ವಾಪಸು ಬರುತ್ತದೆ ಎಂಬುದು ಅವನ ಲೆಕ್ಕಾಚಾರ.

'ಗೋಪಾಲ ರಾವ್, ನಾ ಕೊಟ್ಟ ಕಾದಂಬರಿದು ಏನು ಮಾಡಿದ್ರಿ, ಸಿನಿಮಾ ಕತೆ ಬರೆಯೋಕೆ ಶುರುಮಾಡಿದೀರಾ?...'

'ಇಲ್ಲ ಸಾರ್, ಟೀವಿ ಧಾರಾವಾಹಿಯಲ್ಲೇ ಸಮಯ ಹೋಗ್ತಾ ಇದೆ.'

'ಅದೂ ಸರಿ. ಇದರ ಪ್ರತಿ ಶಾಟೂ, ಒಂದೊಂದು ಸಂಭಾಷಣೆನೂ ಮುಖ್ಯ ನಮಗೆ ರಾವ್. ಹಾಗಿದೆ ಈಗ ಪರಿಸ್ಥಿತಿ.'

ಸುಮಾರು ಒಂದು ವರ್ಷ ಪ್ರಸಾರ ಮಾಡೋ ಹಾಗೆ ಸದ್ಯದ ಕಥಾಹಂದರವಿತ್ತು. ಈ ಘಟ್ಟದಲ್ಲಿ ಕಥೆಗೊಂದು ರೋಚಕ ತಿರುವು ಕೊಡಬೇಕಿತ್ತು. ನಾಯಕಿಯನ್ನು ಅಪಹರಿಸಿ, ಕೆಲಸ ಸಾಧನೆಗೆ ಅವಳನ್ನು ಒಂದು ಗುಪ್ತ ಸ್ಥಳದಲ್ಲಿ ಇಡಬೇಕು. ಆ ರೋಚಕ ಸ್ಥಳದಲ್ಲಿ ಅವಳು ನಡೆಸುವ ಹೋರಾಟದ ಮೂಲಕ ಪ್ರೇಕ್ಷಕರನ್ನು ತುದಿಕಾಲಲ್ಲಿ ನಿಲ್ಲಿಸುವುದು ಗುರಿಯಾಗಿತ್ತು. ಟೀಆರ್‌ಪಿ ಏರುತ್ತ ಹೋದಹಾಗೆ ಮತ್ತೂ ಎಳೀಬೇಕಾಗಿ ಬರಬಹುದು... ಬರಲೇಬೇಕು. ತನ್ನ ಹೆಸರು ಪ್ರಚಾರವಾಗಿರತದೆ. ಮುಂದೆ ಸಿನಿಮಾಕ್ಕೆ ಅದು ಸಹಕಾರಿನೇ. ಅಷ್ಟರಲ್ಲಿ ಈ ಧಾರಾವಾಹಿ ರುಟೀನಾಗಿರುತ್ತೆ. ಅಸಿಸ್ಟೆಂಟಿಗೆ ವಹಿಸಿ ತಾನು ಗೋಪಾಲ ಸಿನಿಮಾ ಕಡೆ ಹೆಚ್ಚಿನ ಲಕ್ಷ್ಯ ಹಾಕಿದ್ರಾಯ್ತು ಅಂದುಕೊಂಡ.

ಮಳೆಗಾಲ ಈಗಷ್ಟೆ ಹಿಂದೆ ಸರಿಯುತ್ತಿದ್ದಕ್ಕೆ ಕಾಡೆಲ್ಲ ಹಸುರಾಗಿ ದಟ್ಟವಾಗಿತ್ತು. ನಿರ್ಜನ ಕಾಡಲ್ಲಿ ಹೆಬ್ಬಾವಿನಂತೆ ಮಲಗಿದ ರಸ್ತೆಯಲ್ಲೆಲ್ಲೂ ದೊಡ್ಡ ಊರು ಸಿಕ್ಕಿರಲಿಲ್ಲ. ಮೂರುನಾಲ್ಕು ಕಿಲೋಮೀಟರು ಓಡಿದರೆ ಅಕ್ಕಪಕ್ಕದ ಊರುಗಳಿಗೆ ಹೋಗುವ ದಾರಿಯನ್ನು ಸಂಧಿಸುವಲ್ಲಿ ಮಾತ್ರ ಊರುಗಳ ಹೆಸರನ್ನು ಹೊತ್ತ ಫಲಕಗಳು. ಒಂದೆರಡು ಸಾಧಾರಣ ಕೆಂಪುಹಂಚಿನ ಮನೆಗಳು. ಅವುಗಳ ಜಗುಲಿಯನ್ನೇ ಬಿದಿರು ತಡಿಕೆ ಕಟ್ಟಿ ಚಹ ಬಿಸ್ಕೆಟ್ಟು, ಸಿಗರೇಟು, ಎಳನೀರು ಮಾರುವ ಚಿಕ್ಕ ಅಂಗಡಿಗಳಾಗಿ ಮಾರ್ಪಡಿಸಿದ್ದು ಕಾಣಸಿಗುತ್ತಿತ್ತು. ಒಂದುಕಡೆ ರಸ್ತೆ ಅಂಚಿನಲ್ಲಿ ಕಾರು ನಿಲ್ಲಿಸಿದ. ಎಲ್ಲ ಇಳಿದರು. ಗಂಡಸರಿಬ್ಬರೂ ರಸ್ತೆಪಕ್ಕ ಮರಗಳ ಮರೆಯಲ್ಲಿ ಮೂತ್ರಬಾಧೆ ತೀರಿಸಿಕೊಂಡರು. ಇಲ್ಲೆಲ್ಲ ನಿರ್ಜನವಾಗಿರುತ್ತೆ. ನಾಕು ಹೆಜ್ಜೆ ಕಾಡೊಳಗೆ ಹೋಗಿ ನೀವೂ ಬೇಕಿದ್ರೆ ರಿಲ್ಯಾಕ್ಸಾಗಿ ಅಂದ ನಾಯ್ಡು. ಆಗಾಗ ಕಾರು, ಸಾರಿಗೆ ಬಸ್ಸುಗಳು ರಸ್ತೆಯಲ್ಲಿ ಹಾದು ಹೋಗುತ್ತಿದ್ದುವು. ಯಾರ ಲಕ್ಷ್ಯವೂ ಇವರತ್ತ ಇರಲಿಲ್ಲ. ಹೆಂಗಸರಿಬ್ಬರು ಪೊದೆಗಳ ಹಿಂದೆ ಹೋಗಿ ಬಂದರು. ಗೋಪಾಲ ಗೂಡಂಗಡಿಯಲ್ಲಿ ಚಹಾ ಮಾಡಿಸಿ ಎಲ್ಲರಿಗೂ ಒಂದೊಂದು ಗ್ಲಾಸು ತಂದುಕೊಟ್ಟ.

ಮರಗಳ ನೆರಳಲ್ಲಿ ಸದ್ದುಗದ್ದಲವಿಲ್ಲದೆ ಬಿಸಿಬಿಸಿ ಚಹ ಕುಡಿಯುತ್ತ, ಎಲ್ಲೆಲ್ಲಿಂದಲೋ ಬಂದು ಸೇರಿದ ನಾಕು ಮನುಷ್ಯರು ನಿಂತ ದೃಶ್ಯ ಬೇರೆ ಲೋಕಕ್ಕೇ ಸೇರಿದ್ದಂತೆ ಕಂಡಿತು ನಾಯ್ಡುಗೆ. ತನ್ನ ಸಿನಿಮಾದಲ್ಲಿ ಇಂಥ ಒಂದು ಸೀನನ್ನು ಸೇರಿಸಬೇಕು. ಇಲ್ಲಿ ಯಾರೂ ಅಭಿನಯಿಸುತ್ತಿಲ್ಲವಾದರೂ ನೈಜ ಅಭಿನಯ ಅಂತ ಹೊಗಳಿಕೆಗೆ ಪಾತ್ರವಾಗುವುದು ಇಂಥದ್ದೇ ಅನಿಸಿತು.

'ಇಲ್ಲಿ ಜನವಸತಿ ಅಷ್ಟಿಲ್ಲ ಅನಿಸುತ್ತೆ. ಇದ್ದವರು ಏನು ಮಾಡತಾರೋ!...' ಉದ್ಗರಿಸಿದಳು ಚಂದನಿಕಾ ತಾಯಿ ಕಮಲಮ್ಮ. 'ಯಾಕಿಲ್ಲ! ಒಳಭಾಗದಲ್ಲಿ ಇಲ್ಲೆಲ್ಲಾ ಜನವಸತಿಯಿರೋ ಹಳ್ಳಿಗಳಿವೆ. ಅಡಕೆತೋಟ, ಗದ್ದೆ ಸಮೃದ್ಧವಾಗಿರತವೆ' ಸಿಗರೇಟು ಹಚ್ಚುತ್ತಾ ನುಡಿದ ಗೋಪಾಲ ರಾವ್.

ಅವರಿಬ್ಬರೂ ಸಂಭಾಷಣೆಯಲ್ಲಿ ಮುಳುಗಿದಂತೆ ರಸ್ತೆಯ ಈ ಕಡೆಯಲ್ಲಿದ್ದ ನಾಯ್ಡು ಚಂದನಿಕಾಳನ್ನು